ಬೆಂಗಳೂರಿನಲ್ಲಿ ನೀರಿನ ಕೊಳವೆ ಪೈಪನ್ನು ಸ್ಥಳಾಂತರಿಸುವ ಕುರಿತು

2397 - ಶ್ರೀ ಪ್ರಕಾಶ್. ಪಿ. ಎಸ್. (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯಲ್ಲಿರುವ ನೀರಿನ ಕೊಳವೆಯ 4 ಇಂಚು ಪೈಪುಗಳನ್ನು ಬೆಂಗಳೂರು ಜಲಮಂಡಳಿಯು ಸ್ಥಳಾಂತರ ಮಾಡುವ ಯೋಜನೆಯನ್ನೇನಾದರೂ ಹಾಕಿಕೊಂಡಿದೆಯೇ?*

ಶ್ರೀ ಅನಂತನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :

ಅ) ಆರ್ಕಾಟ್ ಶ್ರೀನಿವಾಸಾಚಾರ್ ರಸ್ತೆಯನ್ನು ಮತ್ತು ಚರಂಡಿಯನ್ನು ಬೆಂಗಳೂರು ನಗರ ಪಾಲಿಕೆಯವರು ದುರಸ್ತಿ ಮಾಡುತ್ತಿದ್ದಾರೆ. 4 ಅಂಗುಲ ನೀರಿನ ಕೊಳವೆ ರಸ್ತೆಯ ಮಧ್ಯದಲ್ಲಿ ಇರುತ್ತದೆ. ಆದಕಾರಣ 4 ಅಂಗುಲ ಕೊಳವೆಯನ್ನು ಸ್ಥಳಾಂತರಿಸಲು ಬೆಂಗಳೂರು ಜಲಮಂಡಳಿಯು ಒಂದು ಅಂದಾಜು ಪಟ್ಟಿಯನ್ನು ಮಾಡಿ (ರೂ. 3,04,000-00) ಮಹಾನಗರ ಪಾಲಿಕೆಗೆ 5-8-97ರಲ್ಲಿ ಕಳುಹಿಸಲಾಗಿದೆ. ಹಣ ಸಂದಾಯವಾದ ಕೂಡಲೆ 4 ಅಂಗುಲ ಕೊಳವೆಯನ್ನು ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಾರಾಹಿ ಏತ ನೀರಾವರಿ ಕಾಲುವೆಗಳ ಯೋಜನೆ ಪ್ರಾರಂಭ

2399 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಾರಾಹಿ ಏತ ನೀರಾವರಿ ಕಾಲುವೆಗಳು ಯೋಜನೆ ಪ್ರಾರಂಭವಾಗುವ ಮುಂಚೆ ಭೂಕುಸಿತದಿಂದ ಮುಚ್ಚಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಭೂಕುಸಿತದಿಂದ ಕಾಲುವೆಗಳು ಮುಚ್ಚದಂತೆ ಮುಂಜಾಗ್ರತೆ ಕ್ರಮಕ್ಕಾಗಿ ಮಣ್ಣುಗಳ ಪರೀಕ್ಷೆ ಮಾಡಿ ಅಂದಾಜುಪಟ್ಟಿ ತಯಾರಿಸಿಲ್ಲವೆ?*

ಇ) *ತೋಡಿದ ಕಾಲುವೆಯ ಭೂಕುಸಿತದಿಂದ ಮುಚ್ಚದಂತೆ ಏನು ಕ್ರಮ ಕೈಗೊಳ್ಳಲಾಗಿದೆ? ಈ ಹಿಂದೆ ಮುಚ್ಚಿದ ಕಾಲುವೆಗಳನ್ನು ಸರಿಪಡಿಸದಿರಲು ಕಾರಣವೇನು?*

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಬಂದಿದೆ.

ಆ) ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿ ಮಣ್ಣುಗಳ ಪರೀಕ್ಷೆ ಮಾಡಿದ ನಂತರವೇ ಅಂದಾಜುಗಳನ್ನು ತಯಾರಿಸಲಾಗುವುದು.